# ಒಬ್ಬರೇ ಒಬ್ಬರೇ ಎಸ್‌ಪಿಬಿ ಒಬ್ಬರೇ...

ಎಸ್‌ಪಿಬಿ ಅವರ ಮೆಚ್ಚುಗೆ–ಗೌರವ ಪಾತ್ರರಾಗಿದ್ದ ಕನ್ನಡದ ಅನನ್ಯ ಗಾಯಕಿ ಸಂಗೀತಾ ಕಟ್ಟಿ, ಬಾಲು ಅವರೊಂದಿಗಿನ ಅಮೃತಕ್ಷಣಗಳನ್ನು ಮೆಲುಕು ಹಾಕುತ್ತಾ, ಉದ್ಗರಿಸುವುದು – 'ನಮ್ಮ ಸಂಬಂಧವೇ ಬೇರೆ'. ಹೌದು, ಎಸ್‌ಪಿಬಿ ಅವರ ಆಪ್ತವಲಯಕ್ಕೆ ಬಂದ ಎಲ್ಲರಿಗೂ ಅನ್ನಿಸುತ್ತಿದ್ದುದು – 'ಅವರು ನಮ್ಮವರು'.



ಸಂಗೀತಾ ಕಟ್ಟಿ ಕಂಡಂತೆ ಸಂಗೀತನಿಧಿ

■ ನಿರೂಪಣೆ: **ಪದ್ಮನಾಭ ಭಟ್**

ಎಸ್‌ಪಿಬಿ ಅವರ ಹಾಡುಗಳನ್ನು ಕೇಳಿಕೊಂಡೇ ನಾವೆಲ್ಲ ಬೆಳೆದಿದ್ದು. ಅದು ಸಾರ್ವತ್ರಿಕ ಸತ್ಯ. ಮೊದಲಿನಿಂದಲೂ ನಮಗೆ ರೇಡಿಯೊ ಕೇಳುವ ಅಭ್ಯಾಸ ಇತ್ತು. ಧಾರವಾಡದ ಆಕಾಶವಾಣಿಯಲ್ಲಿ ಅವರ ಹಾಡುಗಳು ಬರುತ್ತಲೇ ಇದ್ದವು.

ನಾನು ತುಂಬ ಚಿಕ್ಕ ವಯಸ್ಸಿನಲ್ಲಿಯೇ ಸಂಗೀತ ಕ್ಷೇತ್ರಕ್ಕ ಬಂದೆ. ಅದರಿಂದ, ಸಂಗೀತಲೋಕದ ಅನೇಕ ದಿಗ್ಗಜರನ್ನು ಬಹಳ ಬೇಗನೇ ಭೇಟಿ ಆಗುವ ಭಾಗ್ಯ ಸಿಕ್ಕಿತು. ಆಗ ಹಾಡುಗಳನ್ನು ಧ್ವನಿಮುದ್ರಿಸಲು ಚೆನ್ನೈಗೆ ಹೋಗುತ್ತಿದ್ದೆವು. ನನ್ನ ಹಾಡುಗಳ ಧ್ವನಿಮುದ್ರಣಕ್ಕೆಂದು ಚೆನ್ನೈಗೆ ಹೋಗಿದ್ದಾಗ ಎಸ್‌ಪಿಬಿ ಅವರ ಭೇಟಿಯೂ ಆಗಿಹೋಯ್ತು. ಅವರನ್ನು ನೋಡಿದ್ದೇ ದೊಡ್ಡ ಭಾಗ್ಯ ನನಗೆ. ಎಸ್‌ಪಿಬಿ ನನ್ನ ಕಣ್ಣೆದುರಿಗೆ ಇರುವುದು ನಿಜವಾ ಎಂದು ವಿಸ್ಮಯದಿಂದ ನೋಡಿದ್ದೆ. ನಾನು ಹಾಡುತ್ತಿರುವುದನ್ನು ಅವರು ಕೇಳಿದರು. 'ತುಂಬ ವಿಶಿಷ್ಟವಾದ, ವಿಶೇಷವಾದ ಧ್ವನಿ ನಿನ್ನದು. ಚೆನ್ನಾಗಿ ಕಲಿ. ದೊಡ್ಡ ಹೆಸರು ಮಾಡುತ್ತೀಯಾ' ಎಂದು ಮೆಚ್ಚುಗೆಯ ಮಾತಾಡಿದ್ದರು. ಆಗಿನ್ನೂ ನಾನು ಸ್ಕೂಲಿಗೆ ಹೋಗುವ ಹುಡುಗಿ.

ಅದಾಗಿ ಕೆಲಕಾಲದ ನಂತರ ನಾನು ಸಿನಿಮಾ ಹಿನ್ನೆಲೆ ಗಾಯಕಿಯಾಗಿ ಬಂದಾಗ ಮೊದಲ ಯುಗಳ ಗೀತೆ ಹಾಡಿದ್ದು (ಅಮರ ಪ್ರೇಮ) ಅವರ ಜೊತೆಗೆನೇ! ಇದುವರೆಗೆ ಎಪ್ಪತ್ತು ಎಂಬತ್ತು ಯುಗಳ ಗೀತೆಗಳನ್ನು ಅವರ ಜೊತೆಗೆ ಹಾಡಿದ್ದೇನೆ. ಮದ್ರಾಸಿಗೆ ಹೋದಾಗೆಲ್ಲ ಅವರನ್ನು ಭೇಟಿಯಾಗ್ತಿದ್ದೆ. ಅವರೂ ಸಂಗೀತ ಸ್ಟುಡಿಯೊಗೆ ಬರ್ತಿದ್ರು. ನಮ್ಮ ನಡುವೆ ಒಡನಾಟ, ಬಾಂಧವ್ಯ ಇದ್ದೇ ಇತ್ತು.

ತುಂಬ ಇಷ್ಟಪಟ್ಟು ಮಾತಾಡಿಸುತ್ತಿದ್ದರು. ಬರೀ ಮಾತಾಡಿಸುವುದಷ್ಟೇ ಅಲ್ಲ, ಅಷ್ಟೇ ಆಪ್ತತೆ ಇರುತ್ತಿತ್ತು. ನಾನು ಅವರಿಗಿಂತ ಬಹಳ ಚಿಕ್ಕವಳು. ನನ್ನ ತಾಯಿ ವಯಸ್ಸಿನವರು ಅವರು. ಆದರೂ ನನ್ನನ್ನು ಅಷ್ಟೇ ಅಕ್ಕರೆಯಿಂದ, ಗೌರವದಿಂದ ಮಾತಾಡಿಸುತ್ತಿದ್ದರು. ನಾನು ಬಸವರಾಜ ರಾಜಗುರುಗಳ ಬಳಿ ಹಿಂದೂಸ್ತಾನಿ ಸಂಗೀತಾಭ್ಯಾಸ ಮಾಡುತ್ತಿದ್ದೇನೆ ಎಂದು ಅಪಾರ ಗೌರವ ಕೊಡುತ್ತಿದ್ದರು. ಎಸ್.ಪಿ. ಬಾಲಸುಬ್ರಹ್ಮಣ್ಯಂನಂಥ ಮೇರು ವ್ಯಕ್ತಿಗಳು ನನ್ನಂಥ ಉದಯೋನ್ಮುಖ ಗಾಯಕಿಯನ್ನು ಅಷ್ಟು ತಿಳಿಯಾಗಿ, ಸಲುಗೆಯಿಂದ ಮಾತಾಡಿಸುತ್ತಾರೆ, ಸಂಗೀತದ ಬಗ್ಗೆ ಚರ್ಚೆ, ಮಾಡ್ತಾರೆ, ವಿಚಾರ ವಿನಿಮಯ ಮಾಡುತ್ತಾರೆ. ಸಂಗೀತದ ಸರಿತಪ್ಪುಗಳ ಕುರಿತು ಸಲಹೆ ಕೇಳುತ್ತಾರೆ ಎಂದರೆ ಏನು ಹೇಳುವುದು? ಅದು ಅವರ ವ್ಯಕ್ತಿತ್ವವನ್ನು ಸೂಚಿಸುತ್ತದೆ. ಎಷ್ಟೇ ಚಿಕ್ಕವರಾಗಿದ್ದರೂ ವಯಸ್ಸು ಮನಸ್ಸಿಗೆ ಬಾರದ ಹಾಗೆ ಒಂದು ಕಂಫರ್ಟ್ ಝೋನ್ ಅನ್ನು ಸೃಷ್ಟಿಸಿಬಿಡುತ್ತಿದ್ದರು.

ನಡುವೆ ನಾನು ಮುಂಬೈಗೆ ಹೋಗಿ ಕಿಶೋರಿ ಅಮೋಣಕರ್ ಅವರ ಬಳಿ ಸಂಗೀತ ಕಲಿಯಲಿಕ್ಕೆ ಹೋಗಿದ್ದೆ. ವಾಪಸ್ ಬಂದಾಗ ಒಂದು ಕಾರ್ಯಕ್ರಮದಲ್ಲಿ ಸಿಕ್ಕಿ ತುಂಬ ಖುಷಿಪಟ್ಟರು. 'ಅಷ್ಟು ದೊಡ್ಡ ಗುರುಗಳ ಬಳಿ ವಿದ್ಯಾಭ್ಯಾಸ ಮಾಡುತ್ತಿದ್ದೀಯಮ್ಮಾ... ನಾನೇನು ದೊಡ್ಡ ಮನುಷ್ಯನಲ್ಲಮ್ಮಾ... ನಾಲ್ಕು ಸಿನಿಮಾ ಹಾಡುಗಳನ್ನು ಹಾಡಿಕೊಂಡು ಇದ್ದವನು' ಎಂದೆಲ್ಲ ಮಾತಾಡುತ್ತಿದ್ದರು. ಅಂಥ